ಚೆಂದದ ಹುಡುಗಿಯನ್ನು ಹುಡುಕಿ ಅವನಿಗೆ ಮದುವೆ ಮಾಡಿಸುತ್ತೇನೆ. ಮಕ್ಕಳ ಬಗ್ಗೆ ವಿಚಾರಿಸಲು ನಿನಗೆ ಆಗಾಗ ಫೋನ್ ಮಾಡುತ್ತೇನೆ. ಅಷ್ಟೇ... ಹೇ.. ಪ್ಲೀಸ್ ಅಳಬೇಡ... ಅಕಸ್ಮಾತ್ ಒಂಟಿಯಾಗಿ ಇರಲು ಆಗದೆ ಸೋತರೆ ಹಿಂತಿರುಗಿಯಂತೂ ಬರುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ'.

ಬಿಟ್ಟ ಕಣ್ಣು ಬಿಟ್ಟುಕೊಂಡು ನೋಡುತ್ತಿದ್ದ ಅವಳತ್ತ ನಗೆ ಬೀರಿ, ಅವಳ ಭುಜ ತಟ್ಟಿ ಹಿಂತಿರುಗಿ ನೋಡದೆ ಅಲ್ಲಿಂದ ನಡೆದಿದ್ದೆ.

## ಮುಂಬಯಿಗೆ ಪಯಣ

ಬೆಂಗಳೂರಿಗೆ ಬಂದು, ಅಲ್ಲಿಂದ ಫ್ಲೈಟಿನಲ್ಲಿ ವಿಶ್ವಾಸನೊಂದಿಗೆ ಮುಂಬೈಗೆ ಬಂದು ಅವನು ನನಗಾಗಿ ನೋಡಿ ಇರಿಸಿದ್ದ ಈ ಮನೆ ಅಥವಾ ಫ್ಲಾಟು ಸೇರಿ ಮೂರು ದಿನವಾಗಿದೆ.

ನಾಳೆ ನರ್ಸಿಂಗ್ ಹೋಂಗೆ ಹೋಗಿ ಕೆಲಸಕ್ಕೆ ಸೇರಿಕೊಳ್ಳಬೇಕು. ನಾನು ಹೋಗುತ್ತೇನೆ ಎಂದು ಇವರಿಗೆ ಗೊತ್ತಿರುವುದರಿಂದ ಕಾಣೆಯಾದ ಮೇಲೆ ಸುಮ್ಮನೆ ಇರುತ್ತಾರೆ. ಹೋಗುತ್ತೇನೆ ಎನ್ನುತ್ತಿದ್ದವಳು ಹೋದಳು.. ಎಂದುಕೊಳ್ಳುತ್ತಾರೆ ಎಂದೇ ಭಾವಿಸಿದ್ದೆ. ಅಬ್ಬಬ್ಬಾ ಅಂದರೆ ಅಮ್ಮನ ಮನೆಗೆ ಫೋನ್ ಮಾಡಿ ನಿಮ್ಮ ಮಗಳು ಮತ್ತೆ ಓಡಿಹೋಗಿದ್ದಾಳೆ. ನಿಮ್ಮ ಮನೆಗೆ ಬಂದರೆ ನೀವೇ ಇರಿಸಿಕೊಳ್ಳಿ... ಬೇರೆ ಎಲ್ಲಾದರೂ ಹೋಗಿದ್ದಾರೆ ನಾನು ಹಾಗೂ ನನ್ನ ಕುಟುಂಬದವರು ಜವಾಬ್ದಾರರಲ್ಲ ಎಂದು ಹೇಳುತ್ತಾರೆ... ಮತ್ತು ಅವರ ಲೋಕದಲ್ಲಿ ಮುಳುಗಿಹೋಗುತ್ತಾರೆ ಎಂದೇ ಲೆಕ್ಕ ಹಾಕಿದ್ದು ನಾನು ಪೀಡೆ ಕಳೀತು... ಸಾಕಾಗಿತ್ತು ಇವಳೊಡನೆ ಏಗಿ ಎಂದು ಅತ್ತೆ, ಅಜ್ಜಿ ತಲೆಗೆ ಸ್ನಾನ ಮಾಡಿಕೊಂಡು, ದೇವರಿಗೆ ತುಪ್ಪದ ದೀಪ ಹಚ್ಚಿ ಕೈ ಮುಗಿಯುತ್ತಾರೆ ಎಂದೇ ಅಂದುಕೊಂಡಿದ್ದು. ಆದರೆ.. ಹೀಗೆ... ಎಲ್ಲೆಲ್ಲೂ ಸುದ್ದಿ. ವಿಶ್ವಾಸನ ತಾಯಿಗೆ ಗಾಬರಿಯಾಗಿದೆ.

ನನ್ನ ಮೊಬೈಲ್ ರಿಂಗಾದಾಗ ಬೆಚ್ಚಿದೆ... ನನ್ನ ನಂಬರ್ ಯಾರಿಗೆ ಗೊತ್ತು?...

ಮೀರಾ.. ಎಂದು ಡಿಸ್‌ಪ್ಲೇ ಆದದನ್ನು ನೋಡಿ.... ಗಾಬರಿ ಕಮ್ಮಿಯಾಯಿತು... ಫೋನ್ ಕೈಗೆತ್ತಿಕೊಂಡು ಸ್ವಿಚ್ ಒತ್ತಿದೆ..

'ಹಲೋ...'

'ಹಲೋ.. ಮೇಡಂ... ನಾನು ಮೀರಾ...' ಜೋರು ದನಿಯಲ್ಲಿ ಅವಳು ಮಾತನಾಡಿದಾಗ ಉಗುಳು ನುಂಗಿದೆ.

'ಹಾಂ.. ಮೀರಾ ಗೊತ್ತಾಯಿತು. ಗಾಬರಿ ಯಾಕೆ?.. ಏನಾಯಿತು?..'

'ಏನು ಮೇಡಂ.. ಏನಾಯಿತು ಅಂತ ಅಷ್ಟು ನೆಮ್ಮದಿಯಿಂದ ಕೇಳುತ್ತಿದ್ದೀರಿ. ಎಲ್ಲಿದೀರಿ ನೀವು?. ಊರಲ್ಲಿ ತುಂಬಾ ಗಲಾಟೆ... ಸಾಹೇಬ್ರು ಟಿ.ವಿ.ಯಲ್ಲೆಲ್ಲಾ ನನ್ನ ಹೆಂಡತಿಯನ್ನು ಹುಡುಕಿಕೊಡಿ... ಅವಳಿಲ್ಲದೆ ನನ್ನ ಗೆಲುವು ಏನೂ ಅಲ್ಲ ಎಲೆಕ್ಷನ್ನಿನಲ್ಲಿ ಗೆದ್ದರೂ ಜೀವನದಲ್ಲಿ ಸೋತ ಹಾಗೆ ಆಗಿದೆ ಎಂದು ಕಣ್ಣೀರು ಹಾಕಿದ್ದು ಪದೇ ಪದೇ ಪ್ರಸಾರವಾಗುತ್ತಿದೆ'

'ಏನು ಹೇಳ್ತಾ ಇದ್ಯ ನೀನು ?' ಗಾಬರಿಯಿಂದ ಪ್ರಶ್ನಿಸಿದೆ 'ವಿಕ್ರಮ್ ಯಾಕೆ ಹಾಗೆ ಹೇಳಿದ್ದಾರೆ?'

'ನಿಜ ಮೇಡಂ... ನಮ್ಮ ಮನೆಗೂ ಪೊಲೀಸಿನವರು ಬಂದಿದ್ರು... ನಂಗೆ ಏನೂ ಗೊತ್ತಿಲ್ಲ ಅಂದೆ... ನರಹರಿನ ಮಾತಾಡಿಸಿದ್ದಾರೆ... ಅವನು ಅವನು..'

'ಅವನು ಏನು?'

'ನೀವು ವಿಶ್ವಾಸ್ ಅವರೊಂದಿಗೆ ಹೋಗಿರಬಹುದು ಎಂದು ಹೇಳಿದ್ನಂತೆ... ಮದುವೆಯಾಗಿರುವ ಹೆಣ್ಣಿನ ತಲೆಕೆಡಿಸಿ ಓಡಿಸಿಕೊಂಡು ಹೋಗಿದ್ದಾರೆ ಅಂತ ವಿಶ್ವಾಸ್ ಮೇಲೆ ಕೇಸು ಹಾಕ್ತಾರಂತೆ...'

'ಅದು ಹೇಗೆ ಹಾಕ್ತಾರೆ?.. ನಾನೇ ಎದ್ದು ಬಂದಿರುವುದು... ನಾನೇನು ಕುರಿಯೇ? ಹಸುವೇ?.. ಓಡಿಸಿಕೊಂಡು ಬರಲು?'

'ನೀವು ನನ್ನ ಪ್ರಶ್ನಿಸಬೇಡಿ... ನನಗೇನು ಗೊತ್ತು?... ಲಾ ಇರುವುದೇ ಹಾಗಂತೆ... ಅವರು ನಿಮ್ಮೊಂದಿಗೆ ಇದ್ದರೆ ಅವರನ್ನು ಅರೆಸ್ಟ್ ಮಾಡಬಹುದು. ಮೊದಲು ಕಳಿಸಿಬಿಡಿ. ನೀವೂ ಬಂದು ಬಿಡಿ ಮೇಡಂ...'

'ಮೀರಾ...'

'ನೀವು ಓಡಿ ಹೋದ್ರಿ ಅಂತ ಟಿ.ವಿ.ಯಲ್ಲಿ ಕಣ್ಣೀರು ಹಾಕಿದರೂ.. ಸಾಹೇಬ್ರು ತುಂಬಾ ಕೋಪದಲ್ಲಿ ಇದ್ದಾರಂತೆ... ಸೂರಿ ಹೇಳಿದ... ಸಿ.ಎಂ... ಪೊಲೀಸ್ ಕಮೀಷನರ್ ಅವರೊಂದಿಗೆಲ್ಲಾ ಮಾತಾಡುತ್ತಿದ್ದಾರಂತೆ. ಓ... ಯಾರೋ



## ಇಲ್ಲಿಯವರೆಗೆ

ಎಲೆಕ್ಷನ್ ಪ್ರಚಾರಕ್ಕೆ ಬರುವಂತೆ ವಿಕ್ರಮ್ ಹೆಂಡತಿಗೆ ಕರೆಯುತ್ತಾನೆ. ಸಿಎಂ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ಇದೆ. ಮನೆ ಬಿಟ್ಟು ಹೋಗುವ ನಿರ್ಧಾರ ಮಾಡಿದ್ದೇನೆ ಎಂದು ಆಕೆ ಹೇಳಿದಾಗ ಎಷ್ಟು ಸಲ ಹೇಳಿದ್ದನ್ನೇ ಹೇಳ್ತೀಯಾ, 'ನೀನು ಹೋದರೆ ಮರಳಿ ಬರುವಂತಿಲ್ಲ, ಮಕ್ಕಳನ್ನು ಕಳಿಸೋದಿಲ್ಲ' ಎನ್ನುತ್ತಾನೆ ಅಲ್ಲದೆ ಹೋದರೆ ನಿನಗೂ ಕಷ್ಟ ಮಕ್ಕಳಿಗೂ ಕಷ್ಟ ಎಂದೂ ಹೇಳುತ್ತಾನೆ. ಹಾಗಾದರೆ ಚುನಾವಣೆ ಮುಗಿದ ಮೇಲೆ ಹೋಗುತ್ತೇನೆ, ತಡೆಯಬಾರದು ಎಂದು ಹೇಳುತ್ತಾಳೆ. ಎಲ್ಲದಕ್ಕೂ ತಯಾರಾಗಿರುವ ಆಕೆ ವಿಶ್ವಾಸನಿಗೆ ಫೋನ್ ಮಾಡುತ್ತಾಳೆ. ಗಂಡ ಮನೆ ಬಿಟ್ಟು ವಿಶ್ವಾಸನ ಜತೆಗೆ ಬರುವುದಾಗಿ ತಿಳಿಸುತ್ತಾಳೆ. ಅಲ್ಲದೆ ವಿಶ್ವಾಸನ ಮೇಲೆ ಪ್ರೇಮವಿದೆ ಎಂದೂ ಹೇಳುತ್ತಾಳೆ. ಒಂದು ಕೆಲಸವನ್ನೂ ಕೊಡಿಸುವಂತೆ ವಿಶ್ವಾಸನ ಬಳಿ ವಿನಂತಿ ಮಾಡಿಕೊಳ್ಳುತ್ತಾಳೆ.

ಬರ್ತಿದಾರೆ... ಫೋನ್ ಇಡ್ತೀನಿ ಮೇಡಂ...'

ಮೊಬೈಲ್ ಫೋನ್ ನನ್ನ ಕೈಯಿಂದ ಜಾರಿತು.

ವಿಶ್ವಾಸ್ ಬಳಿ ಬಂದು ಭುಜ ಬಳಸಿದಾಗ ಅವನೆದೆಗೊರಗಿದೆ...

'ನಾನಿದ್ದೇನೆ... ಹೆದರಬೇಡಿ. ಏನೂ ಆಗೋಲ್ಲ...' ಕಿವಿಯಲ್ಲಿ ಅವನು ಉಸುರಿದಾಗ ತಲೆ ಎತ್ತಿ ಅವನತ್ತ ನೋಡಿದೆ.

'ಹೂಂ... ನೀವು ಇರುವುದೇ ಪ್ರಾಬ್ಲಂ ಆಗಬಹುದು ಅಂತ ಮೀರಾ ಹೇಳಿದ್ದು ಈಗ...'

'ಅಂದ್ರೆ?' ಹುಬ್ಬೇರಿಸಿದ ವಿಶ್ವಾಸ್

'ನಿಮ್ಮ ಫ್ರೆಂಡ್ಸ್ ಪೈಕಿ ಲಾಯರ್ ಯಾರಾದ್ರೂ ಇದ್ರೆ ವಿಚಾರಿಸಿ ವಿಶ್ವಾಸ್. ನಾನು ನಿಮ್ಮೊಂದಿಗೆ ಇರುವುದು... ನನಗೆ ನಿಮಗೆ ಸರಿ... ಆದರೆ ನೀವು ನನ್ನ ತಲೆಕೆಡಿಸಿ ಕರೆದುಕೊಂಡು ಬಂದ್ರಿ ಎಂದು ಲಾ ಹೇಳುತ್ತದ್ದಂತೆ... ಹಾಗಾಗಿ ನಿಮ್ಮನ್ನು ಅರೆಸ್ಟ್ ಮಾಡಬಹುದಂತೆ...' ಮೆಲ್ಲನೆ ಹೇಳಿದೆ. ಎಷ್ಟೇ ಬೇಡ ಅಂದುಕೊಂಡರೂ ದನಿ ನಡುಗಿತು.

'ನಿಮ್ಮ ಶಿಷ್ಯೆ ನೀವು ಹಿಂತಿರುಗಿ ಬರಲಿ ಅಂತ ಇಲ್ಲಸಲ್ಲದ್ದು ಹೇಳ್ತಾ ಇದ್ದಾರೆ... ಅವರಿಗೆ ಜಲಸ್ ಕಣ್ರೀ...'

'ವಿಶ್ವಾಸ್... ಆ್ಯಮ್ ಸೀರಿಯಸ್...ನಿಮ್ಮನ್ನು ಅರೆಸ್ಟ್ ಮಾಡಿದರೆ, ನಾನು ಆತ್ಮಹತ್ಯೆ ಮಾಡಿಕೊಂಡು ಬಿಡ್ತೀನಿ... ಅಯ್ಯೋ ಪಾಪ ಅಂದ್ರೆ ಅರ್ಥ ಆಯಸ್ಸಂತೆ!... ನಿಮಗೇನು ಕರ್ಮ! ನೀವು ಬೆಂಗಳೂರಿಗೆ ಹೋಗಿ... ನನ್ನೊಂದಿಗೆ ಇರುವುದು... ಬೇಡ... ನನ್ನಿಂದ ನಿಮಗೆ ಅನ್ಯಾಯವಾಗಬಾರದು..'.

'ಹೂಂ...' ನನ್ನನ್ನು ಮತ್ತಷ್ಟು ಭದ್ರವಾಗಿ ಹಿಡಿದುಕೊಂಡು ತನ್ನೆಡೆಗೆ ಸೆಳೆದುಕೊಂಡ ವಿಶ್ವಾಸ್. ಈ ಕ್ಷಣ ಅಮರ ಈ ಹಿಡಿತವೇ ಅಮೂಲ್ಯ... ಆದರೆ ವಿಶ್ವಾಸ್... ಚೆನ್ನಾಗಿರಬೇಕು.